RNU AIR DHARWAD

NOVEMBER 05, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ರಾಜ್ಯದ ಗ್ರಾಮೀಣ ಭಾಗದ ಮಕ್ಕಳಿಗೆ, ಗುಣಮಟ್ಟದ, ಉತ್ತಮ ಶಿಕ್ಷಣ ನೀಡಲು, ಎರಡು ಸಾವಿರ ಸರ್ಕಾರಿ ಶಾಲೆಗಳನ್ನು, ಖಾಸಗಿ ಶಾಲೆಗಳ ಜೊತೆ ಜೋಡಣೆ ಮಾಡಲಾಗುವುದು ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ತಿಳಿಸಿದ್ದಾರೆ. ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ, ಸಾಮಾಜಿಕ ಸಾಂಸ್ಥಿಕ ಹೊಣೆಗಾರಿಕೆ ಪ್ರತಿನಿಧಿಗಳ ಸಭೆಯಲ್ಲಿ, 'ನಮ್ಮ ಶಾಲೆ, ನಮ್ಮ ಜವಾಬ್ದಾರಿ' ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಒಂದು ಖಾಸಗಿ ಶಾಲೆ, 3 ಸರ್ಕಾರಿ ಶಾಲೆಗಳನ್ನು ದತ್ತು ಪಡೆಯಲು ಅವಕಾಶ ನೀಡಲಾಗಿದೆ, ಎಂದರು.

<><><>

ರಕ್ಷಣಾ ಕ್ಷೇತ್ರದಲ್ಲಿ ಬಳಸಲಾಗುವ, ಇಲೆಕ್ಟ್ರೋ–ಆಪ್ಟಿಕಲ್, ಇನ್‌ಫ್ರಾರೆಡ್ ಹಾಗೂ ಥರ್ಮಲ್ ಇಮೇಜಿಂಗ್, ಸೆನ್ಸರ್ ಮುಂತಾದ, ಸ್ವಯಂ ಚಾಲಿತ ರಕ್ಷಣಾ ಸಾಧನಗಳನ್ನು ತಯಾರಿಸುವ, ಟಾನ್ಫೋ ಇಮೇಜಿಂಗ್ ಇಂಡಿಯಾ ಕಂಪೆನಿ, ರಾಜ್ಯದಲ್ಲಿ ತನ್ನ ಘಟಕ ಸ್ಥಾಪಿಸಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಬೆಂಗಳೂರಿನ, ಐ.ಟಿ.ಐ.ಆರ್ ನಲ್ಲಿ 5 ಎಕರೆ ಹಾಗೂ ಪರೀಕ್ಷಾ ಸೌಲಭ್ಯಗಳ ಘಟಕ ನಿರ್ಮಾಣಕ್ಕೆ, ವಿಜಯಪುರ ಜಿಲ್ಲೆಯ, ಮುಳವಾಡದಲ್ಲಿ, 130 ಎಕರೆ ಜಾಗೆ ಕೇಳಿ, ಪ್ರಸ್ತಾವ ಸಲ್ಲಿಸಿದೆ ಎಂದು, ಸಚಿವರು ಮಾಹಿತಿ ನೀಡಿದ್ದಾರೆ.

<><><>

ಕಾರಾಗೃಹದಲ್ಲಿ ಆಯೋಜಿಸುವ ತರಬೇತಿ ಹಾಗೂ ಮನಃ ಪರಿವರ್ತನೆ ಕಾರ್ಯಕ್ರಮಗಳ ಸದುಪಯೋಗದಿಂದ, ಕೈದಿಗಳು, ಉತ್ತಮ ನಾಗರಿಕರಾಗಿ ರೂಪುಗೊಳ್ಳಬಹುದು ಎಂದು, ಕಾರಾಗೃಹ ಮತ್ತು ಸುಧಾರಣಾ ಸೇವೆಗಳ, ಪೊಲೀಸ್ ಮಹಾ ನಿರ್ದೇಶಕ, ಅಲೋಕಕುಮಾರ ಹೇಳಿದ್ದಾರೆ. ರುಡ್‌ಸೆಟ್ ಸಂಸ್ಥೆ ಸಹಯೋಗದಲ್ಲಿ, ಧಾರವಾಡ ನಗರ ಕೇಂದ್ರ ಕಾರಾಗೃಹದಲ್ಲಿ, ಕೈದಿಗಳ ಕೌಶಲ್ಯಾಭಿವೃದ್ಧಿ ಕಾರ್ಯಾಗಾರಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

<><><>

ಸಾರ್ವಜನಿಕ ಸ್ಥಳಗಳಲ್ಲಿ, ಮಹಿಳೆಯರು ಮತ್ತು ಮಕ್ಕಳಿಗೆ ಸಂಕಷ್ಟ ಪರಿಸ್ಥಿತಿಗಳಲ್ಲಿ ರಕ್ಷಣೆ ನೀಡುವುದು, 'ಅಕ್ಕ'ಪಡೆ ಕಾರ್ಯವಾಗಿದೆ ಎಂದು, ಧಾರವಾಡ ಜಿಲ್ಲೆ, ಪೊಲೀಸ್ ವರಿಷ್ಠಾಧಿಕಾರಿ, ಗುಂಜನ್ ಆರ್ಯ ತಿಳಿಸಿದ್ದಾರೆ. ಪೊಲೀಸ್ ತರಬೇತಿ ಶಾಲೆಯಲ್ಲಿ ಆಯೋಜಿತ, ನಾಲ್ಕು ದಿನಗಳ, ಅಕ್ಕ ಪಡೆ, ಗೃಹ ರಕ್ಷಕಿಯರಿಗೆ, ಸ್ವರಕ್ಷಣೆ ಕೌಶಲ ಕಲಿಕೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. 31 ಜಿಲ್ಲೆಗಳ, 5 ಕಮಿಷನರೇಟ್ ವ್ಯಾಪ್ತಿಯ, 78 ಗೃಹ ರಕ್ಷಕಿಯರು ತರಬೇತಿ ಶಿಬಿರದಲ್ಲಿ, ಭಾಗವಹಿಸಿದ್ದಾರೆ.

<><><>

ವೀರಶೈವ ಧರ್ಮದ, ಪಂಚಪೀಠಗಳಲ್ಲಿ ಒಂದಾದ, ಉತ್ತರಪ್ರದೇಶದ ಕಾಶಿ ಜ್ಞಾನಪೀಠದಲ್ಲಿ, 1920ರಲ್ಲಿಯೇ ಆಗಿನ ಪೀಠಾಚಾರ್ಯರಾಗಿದ್ದ, ಲಿಂಗೈಕ್ಯ, ಜಗದ್ಗುರು, ಶ್ರೀ ಶಿವಲಿಂಗ ಶಿವಾಚಾರ್ಯ ಭಗವತ್ಪಾದರು, ಕರ್ನಾಟಕ ಸಂಘವನ್ನು ಸ್ಥಾಪಿಸಿ, ಕನ್ನಡದ ಕಾರ್ಯಗಳಿಗೆ ಪ್ರೋತ್ಸಾಹ ನೀಡಿದ್ದರು ಎಂದು, ಕಾಶಿ ಜ್ಞಾನಪೀಠದ ಡಾಕ್ಟರ್ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ತಿಳಿಸಿದ್ದಾರೆ. ವಾರಾಣಸಿಯ ಜಂಗಮವಾಡಿ ಮಠದಲ್ಲಿ, ಕನ್ನಡ ರಾಜ್ಯೋತ್ಸವ ಮಾಸಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

<><><>

ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಧ್ವನಿ 45 ಸೆಕೆಂದುಗಳು

<><><>

ಪಡಿತರ ಚೀಟಿದಾರರು, ಇ–ಕೆವೈಸಿ ಮಾಡಿಸಲು, ಈ ತಿಂಗಳ 10ನೇ ತಾರೀಖು ಕೊನೆಯ ದಿನವಾಗಿದೆ ಎಂದು, ಆಹಾರ ಇಲಾಖೆ ತಿಳಿಸಿದೆ. 41 ಲಕ್ಷ 33 ಸಾವಿರದ 529 ಪಡಿತರ ಚೀಟಿದಾರರು, ಇ–ಕೆವೈಸಿ ಮಾಡಿಸಬೇಕಿದೆ.

<><><>

ಮೀಜೋರಾಂ ಕೃಷಿ ಅಧಿಕಾರಿಗಳ ತಂಡ, ಧಾರವಾಡ ಕೃಷಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಕೃಷಿ ತಂತ್ರಜ್ಞಾನಗಳ ಮಾಹಿತಿ ಪಡೆಯಿತು. ಮಿಜೋರಾಂ ಕೃಷಿ ಸಮಿತಿ ನಿರ್ದೇಶಕ, ಆರ್. ಲಲ್ರಾಮಲುನಿ ನೇತೃತ್ವದ ತಂಡ, 30 ಕ್ವಿಂಟಲ್ ಹೆಸರು, ಉದ್ದು ಬೀಜಗಳ ಖರೀದಿಗೆ ಪ್ರಸ್ತಾವ ಸಲ್ಲಿಸಿದೆ. ಮೀಜೋರಾಂ ಹಾಗೂ ಕರ್ನಾಟಕ, ಭೌಗೋಳಿಕ ರೀತ್ಯಾ ಹಾಗೂ ಪರಿಸರ ದೃಷ್ಟಿಯಿಂದ ಅನೇಕ ಸಾಮ್ಯತೆ ಹೊಂದಿದ್ದು, ಸಮುದ್ರ ಮಟ್ಟದಿಂದ ಒಂದೇ ಎತ್ತರದಲ್ಲಿ ಇವೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ ತಂತ್ರಜ್ಞಾನವನ್ನು, ಅಳವಡಿಸಲು ಪೂರಕವಾಗಿವೆ ಎಂದು, ಆರ್. ಲಲ್ರಾಮಲುನಿ ತಿಳಿಸಿದರು.

<><><>

ವಿಜಯನಗರ ಜಿಲ್ಲೆ, ಹೂವಿನ ಹಡಗಲಿ ತಾಲೂಕು, ಉತ್ತಂಗಿ ಗ್ರಾಮದ ರೈತರು ಬೆಳೆದ ಎ ಶ್ರೇಣಿ ಈರುಳ್ಳಿ, ಬೆಂಗಳೂರಿನ ಯಶವಂತಪುರ ಮಾರುಕಟ್ಟೆಯಲ್ಲಿ, ಪ್ರತಿ ಕ್ವಿಂಟಾಲ್‌ಗೆ 6 ಸಾವಿರದ 200 ರೂಪಾಯಿಗೆ ಮಾರಾಟವಾಗಿ, ಗರಿಷ್ಟ ದರ ಗಳಿಸಿತು.

<><><>

ಜಪಾನ್ ದೇಶದ, ನಾಗೋಯಾದಲ್ಲಿ ನಡೆದ, ಏಷ್ಯನ್ ಪ್ಯಾರಾಲಿಂಪಿಕ್ ಕೀಡೆಗಳಲ್ಲಿ, ಪದಕ ವಿಜೇತರ ಜೊತೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಸಂಜೆ, ಹೊಸ ದಿಲ್ಲಿಯ ಇಂದಿರಾ ಗಾಂಧಿ ಕ್ರೀಡಾ ಸಂಕೀರ್ಣದಲ್ಲಿ, ಸಂವಾದ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ, ಕ್ರೀಡಾಪಟುಗಳನ್ನು ಉದ್ದೇಶಿಸಿ, ಅವರು ಮಾತನಾಡಲಿದ್ದಾರೆ ಎಂದು, ಕೇಂದ್ರ ಯುವಜನ ಸೇವೆ ಮತ್ತು ಕ್ರೀಡಾ ಸಚಿವಾಲಯ, ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.